(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಭಾವಿಯಲ್ಲಿ ಧರಣ ಮಾಡಿದರು)

ಶ್ರೀ ಜಿ. ವಿ. ರಾಮರೆಡ್ಡಿ :- ಮಾನ್ಯ ಅಧ್ಯಕ್ಷರೇ, ಈ ಎಲ್ಲಾ ಕಾರಣಕ್ಕೂ ವಿಫಲರಾಗಿರತಕ್ಕಂಥ ಮುಖ್ಯ ಕಾರ್ಯದರ್ಶಿಯವರನ್ನು ಅಮಾನತ್ತುಗೊಳಿಸಬೇಕೆಂದು ನಾನು ಹೇಳಿದೆ. ಆದರೆ ಅದಕ್ಕೆ ಸರಕಾರ ಒಪ್ಪುತ್ತಾ ಇಲ್ಲ. ಅದನ್ನು ಪ್ರತಿಭಟನೆ ಮಾಡಿ ನಾನು ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ಶ್ರೀ ಜಿ. ವಿ. ರಾಮರೆಡ್ಡಿಯವರು ಸಭಾತ್ಯಾಗ ಮಾಡಿದರು)

ಶ್ರೀ ಕೆ. ಎಸ್. ಪುಟ್ಟಣಯ್ಯ :- ಮಾನ್ಯ ಅಧ್ಯಕ್ಷರೇ, ಸರಕಾರವು ಆಡಳಿತ ವ್ಯವಸ್ಥೆಯಲ್ಲಿ ಸಮರ್ಪಕವಾಗಿ ಕರ್ತವ್ಯ ನಿರ್ವಹಣೆ ಮಾಡದೇ ಇರುವುದರಿಂದ, ಆಂಧ್ರ ಹೈಕೋರ್ಟಿನಿಂದ ನೋಟೀಸ್ ಬಂದು 20 ದಿವಸಗಳಾದರೂ ಜವಾಬ್ದಾರಿಯುತವಾಗಿ ಕಾರ್ಯನಿರ್ವಹಣೆ ಮಾಡಲಿಲ್ಲ. ಏಕೆಂದರೆ ಅತೀ ಜವಾಬ್ದಾರಿಯಾದವುಗಳು ಅಂದರೆ ಕಾಗದ ಪತ್ರಗಳು. ಎಲ್ಲಾ ಆಸ್ಪತ್ರೆಗಳಲ್ಲಿಯೂ ಕೂಡ ಒಂದು ಇಂಟೆನ್ಸಿವ್ ಕೇರ್ ವಿಭಾಗ ಇದ್ದೇ ಇರುತ್ತದೆ. ಬಹಳ ಸೀರಿಯಸ್ ಆದ ರೋಗಿ ಬಂದಾಗ ತತ್‌ಕ್ಷಣ ಅಡ್ಮಿಟ್ ಮಾಡಿಕೊಳ್ಳಲು ಒಂದು ಖಾಲಿ ವಾರ್ಡ್‌ನ್ನು ಇಟ್ಟುಕೊಂಡಿರುತ್ತಾರೆ. ಅದೇ ರೀತಿಯಲ್ಲಿ ಸರಕಾರದ ಅತ್ಯಂತ ಜವಾಬ್ದಾರಿ ಕಾಗದಪತ್ರಗಳನ್ನು ಸೂಕ್ತ ಕಾಲದಲ್ಲಿ ಸರಕಾರಕ್ಕೆ ತಲುಪಿಸತಕ್ಕಂಥ ಕೆಲಸವನ್ನು ಮಾಡಬೇಕು. ಆ ದಿಸೆಯಲ್ಲಿ ಸರಕಾರದ ಆಡಳಿತ ವ್ಯವಸ್ಥೆಯು ಸಮರ್ಪಕವಾಗಿ ಇಲ್ಲದೆ ಇರುವುದರಿಂದ ನಾನು ಅದನ್ನು ವಿರೋಧ ಮಾಡಿ ಧರಣಿ ಹೂಡುತ್ತೇನೆ.

(ಮಾನ್ಯ ಸದಸ್ಯರಾದ ಶ್ರೀ ಕೆ. ಎಸ್. ಪುಟ್ಟಣ್ಣಯ್ಯನವರು ಭಾವಿಯಲ್ಲಿ ಧರಣಿ ಹೂಡಿದರು)

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ :- ಮಾನ್ಯ ಅಧ್ಯಕ್ಷರೇ, ಇಂಥ ನೆಗ್ಲಿಜೆನ್ಸ್‌ಗೆ ಇದೊಂದೆ ಘಟನೆ ಅಲ್ಲ, ಅದು ನಡೆಯುತ್ತಿದ್ದರೂ ಸರಕಾರ ಅದನ್ನು ಗಮನಿಸುತ್ತಾ ಇಲ್ಲ. ಹೀಗೆ ಯಾರು ನೆಗ್ಲಿಜೆನ್ಸ್ ಮಾಡುತ್ತಾರೋ ಅಂಥವರ ಮೇಲೆ ಸರಕಾರದವರು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು. ಈ ವಿಚಾರದಲ್ಲಿ ಯಾವ ಅಧಿಕಾರಿಯ ಕೈವಾಡ ಇದೆ ಅವರನ್ನು ಕೂಡಲೇ ಸಸ್ಪೆಂಡ್ ಮಾಡಬೇಕೆಂದು ಹೇಳಿ, ನಾನು ಸದನದಲ್ಲಿ ಧರಣಿ ಕುಳಿತುಕೊಳ್ಳುತ್ತೇನೆ.

(ಮಾನ್ಯ ಸದಸ್ಯರಾದ ಶ್ರೀ ಜುಲ್ಫಿಕರ್ ಹಷ್ಮಿಯವರು ಭಾವಿಯಲ್ಲಿ ಧರಣಿ ಕುಳಿತರು)

ಶ್ರೀ ಎಂ. ಬಸಪ್ಪ :- ಮಾನ್ಯ ಅಧ್ಯಕ್ಷರೇ, ಸರಕಾರದ ಈ ಒಂದು ನಿರ್ಲಕ್ಷತೆಯನ್ನು ಪ್ರತಿಭಟಿಸಿ ಸಭಾತ್ಯಾಗವನ್ನು ಮಾಡುತ್ತೇವೆ.